3) ಸರ್ಕಾರದ ಆದೇಶದ ಸಂಖ್ಯೆ: ಹೆಚ್ ಎಫ್ ಡಬ್ಲ್ಯೂ 480 ಸಿಜಿಎಂ 80 ದಿನಾಂಕ : 25-11-1980 ರಲ್ಲಿ 50 ಹಾಸಿಗೆಗಳಿಗೆ ಈಗಾಗಲೇ ಉನ್ನತೀಕರಿಸಿದೆ.

ಬೆಂಗಳೂರು ಸುತ್ತಮುತ್ತ ಕೈಗಾರಿಕೆಗಳ ನಿರ್ಮಾಣ

285 (562) ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ):- ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಬೆಂಗಳೂರು ಮಹಾ ನಗರದ ಸದ್ಯದ ಜನ ಮತ್ತು ವಾಹನಗಳ ದಟ್ಟಣೆಗೆ ಮತ್ತು ಸುತ್ತ ಮುತ್ತಲಿರುವ ಕೈಗಾರಿಕೆಗಳು ಕಾರಣವಾಗಿರುವುದರಿಂದ ಬೆಂಗಳೂರು ನಗರ ವಲಯದ ಹೊರಗಡೆ ಕೈಗಾರಿಕಾ ಪ್ರದೇಶ ಮತ್ತು ಕೈಗಾರಿಕಾ ವಸತಿ ಪ್ರದೇಶಗಳನ್ನು ಅಭಿವೃದ್ಧಿ ಪಡಿಸಲು ಸರ್ಕಾರ ಉದ್ದೇಶಿಸಿದೆಯೇ?

ಆ) ಈಗಾಗಲೇ ಗುರುತಿಸಿರುವ ಅಂತಹ ಪ್ರದೇಶಗಳು ಯಾವುವು?

ಇ) ಬೆಂಗಳೂರು-ಮೈಸೂರು ರೈಲ್ವೆ ಮಾರ್ಗ ಬ್ರಾಡ್‌ಗೇಜ್ ಆಗಿ ಪರಿವರ್ತನೆಗೊಳ್ಳುತ್ತಿರುವುದರಿಂದ ಈ ಮಾರ್ಗದ ಅಕ್ಕ ಪಕ್ಕದಲ್ಲಿ ಕೈಗಾರಿಕಾ ಪ್ರದೇಶ ಮತ್ತು ಕೈಗಾರಿಕಾ ವಸತಿ ಪ್ರದೇಶವನ್ನು ಅಭಿವೃದ್ಧಿ ಪಡಿಸಲು ಕಾರ್ಯಕ್ರಮ ಹಾಕಿ ಕೊಳ್ಳಲಾಗುವುದು ?

ಶ್ರೀಮತಿ ಮನೋರಮ ಮಧ್ವರಾಜ್ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):-

ಅ) ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು ಈಗಾಗಲೇ ಬೆಂಗಳೂರು ಜಿಲ್ಲೆಯಲ್ಲಿ ಸ್ಥಾಪಿಸಿರುವ ಕೈಗಾರಿಕಾ ಪ್ರದೇಶಗಳು ಬೆಂಗಳೂರು ಮಹಾ ನಗರ ವಲಯದ ಹೊರಗಡೆ ಇರುತ್ತವೆ.

ಇನ್ನು ಮುಂದೆಯೂ ಸಹ ಕೈಗಾರಿಕಾ ಪ್ರದೇಶಗಳನ್ನು ಬೆಂಗಳೂರು ನಗರ ವಲಯದ ಹೊರಗಡೆ ಸ್ಥಾಪಿಸಲಾಗುವುದು.

ಆ) ಮಂಡಳಿಯು ಈವರೆವಿಗೂ ಹೊಸ ಕೈಗಾರಿಕಾ ಪ್ರದೇಶಗಳಿಗೆ ಬೇಕಾಗುವ ಜಾಗವನ್ನು ಗುರುತಿಸಿರುವುದಿಲ್ಲ.

ಇ) ಈವರೆವಿಗೂ ಬೆಂಗಳೂರು-ಮೈಸೂರು ರೈಲ್ವೆ ಮಾರ್ಗದ ಅಕ್ಕಪಕ್ಕದಲ್ಲಿ ಕೈಗಾರಿಕಾ ಪ್ರದೇಶವನ್ನು ನಿರ್ಮಿಸಲು ನಿರ್ಧಾರವನ್ನು ಕೈಗೊಂಡಿರುವುದಿಲ್ಲ.

ಬಿಜಾಪುರ ಜಿಲ್ಲೆಯ ರೇಷ್ಮೆ ಕೃಷಿಗೆ ಉತ್ತೇಜನ

286 (253) ಶ್ರೀ ಮನೋಹರ್ ಐನಾಪುರ (ಬಳ್ಳೊಳ್ಳಿ):- ಮಾನ್ಯ ರೇಷ್ಮೆ ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಬಿಜಾಪುರ ಜಿಲ್ಲೆಯು ಶಾಶ್ವತವಾಗಿ ಬರಪೀಡಿತ ಪ್ರದೇಶ ಎಂಬುದು ನಿಜ ಸ್ಥಿತಿಯೇ?

ಆ) ಜಿಲ್ಲೆಯಲ್ಲಿ ರೇಷ್ಮೆ ಕೃಷಿಯನ್ನು ಉತ್ತೇಜಿಸಲು ಆಳವಡಿಸಿಕೊಂಡ ಕ್ರಮಗಳೇನು?

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು):-

ಅ) ಇಲ್ಲ.

ಆ) 1) 1539 ಹೆಕ್ಟೇರು ಪ್ರದೇಶವನ್ನು ಹಿಪ್ಪು ನೇರಳೆ ವ್ಯವಸಾಯಕ್ಕೆ ಆಳವಡಿಸಿದೆ.

2) ಹಿಪ್ಪು ನೇರಳೆ ವ್ಯವಸಾಯ ಕೈಗೊಳ್ಳಲು ಹುಳು ಸಾಕಣೆ ಉಪಕರಣಗಳನ್ನು ಕೊಳ್ಳಲು ಹುಳು ಸಾಕಣೆ ಮನೆ ಕಟ್ಟಲು ವಾಣಿಜ್ಯ ಮತ್ತು ಕೋ-ಆಪರೇಟೀವ್ ಬ್ಯಾಂಕರ್‌ಗಳಿಂದ ರೈತರಿಗೆ ಸಾಲ ಒದಗಿಸುವುದು.

3) ರೈತರಿಗೆ ಹುಳು ಸಾಕಣೆಗೆ ಬೇಕಾದ ಮೊಟ್ಟೆಗಳನ್ನು ಒದಗಿಸಲು ಗ್ರೈನೇಜನ್ನು ಸ್ಥಾಪಿಸಿಡುವುದು.

4) ರೈತರಿಗೆ ಹಿಪ್ಪು ನೇರಳೆ ಕಡ್ಡಿ ಅಥವಾ ಸಸಿಗಳನ್ನು ಒದಗಿಸಲು ಮೂಲರೇಷ್ಮೆ ಹುಳು ತಳಿಗಳನ್ನು ಸಾಕಲು, ರೈತರಿಗೆ ಹಿಪ್ಪು ನೇರಳೆ ವ್ಯವಸಾಯ ಮತ್ತು ಹುಳು ಸಾಕಣೆ ಬಗ್ಗೆ ತಿಳುವಳಿಕೆ ನೀಡಲು 3 ರೇಷ್ಮೆ ಕೃಷಿ ಕ್ಷೇತ್ರಗಳನ್ನು ಸ್ಥಾಪಿಸಿದೆ.